ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 28 ಚಾಸಾ- 45**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಉಮಾದೇವಿ ಎಸ್ ಎ |
| ಗಂಡನ ಹೆಸರುಃ | : | ಸಿ.ಡಿ. ಮಲ್ಲೇಶಪ್ಪ |
| ವಯಸ್ಸುಃ | : | 55 ವರ್ಷ |
| ಉದ್ಯೋಗಃ | : | ಹಿರಿಯ ಉಪನೋಂದಣಾಧಿಕಾರಿ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಹಾಸನದಲ್ಲಿ 2012 ರಿಂದ 2016ರವರೆಗೆ ಕಿರಿಯ ಉಪನೋಂದಣಾಧಿಕಾರಿಯಾಗಿ ಹಾಗೂ ನಂತರದಲ್ಲಿ ಹಿರಿಯ ಉಪನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ22-11-2013ರಂದು ಹಾಸನ ಲೋಕಾಯುಕ್ತ ವಿಭಾಗದ ಪೊಲೀಸ್ ಉಪಾಧೀಕ್ಷಕರು ಸಿ.ಆರ್ ಮಂಜುನಾಥ್ ಎಂಬುವವರಿಗೆ ಸಂಬಂಧಪಟ್ಟ ದಿಃ26-9-2005ರ ಕ್ರಯಪತ್ರದ ನಕಲು ಹಾಗೂ ಅವರ ಹೆಂಡತಿಗೆದಿಃ7-12-2010ರಂದು ಕರ್ನಾಟಕ ಗೃಹಮಂಡಳಿಯಿಂದ ಮಂಜೂರಾದ ನಿವೇಶನದ ಕ್ರಯಪತ್ರ ಹಾಗೂ ಅದರ ದಾನಪತ್ರದ ಪ್ರತಿಯನ್ನು ಹಾಗೂ ಅದರ ಮುದ್ರಾಂಕ ಶುಲ್ಕ ಮತ್ತಿತರ ಶುಲ್ಕವನ್ನು ಪಾವತಿಸಿರುವ ವಿವರವನ್ನು ನೀಡುವಂತೆ ಕೇಳಿದ್ದರು. ಅದರಂತೆ 23-11-2013ರಂದು ನಾನು ಮಾಹಿತಿಯನ್ನು ಪತ್ರಮುಖೇನ ನೀಡಿರುತ್ತೇನೆ. ಆ ಪತ್ರವನ್ನು ನಾನು ನೋಡುತ್ತಿದ್ದು ಅದನ್ನು ನಿಪಿ-146 ಎಂದು

ಅದರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-146(ಎ) ಎಂದು ಗುರುತಿಸಲಾಯಿತು. ಅದರೊಂದಿಗೆ ಕ್ರಯಪತ್ರದ ದೃಢೀಕೃತ ನಕಲನ್ನು ನೀಡಿರುತ್ತೇನೆ. ಅದನ್ನು ನೋಡುತ್ತಿದ್ದು ನಿಪಿ-147 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಸಿ ಎನ್ ವಿ **ವಕೀಲರಿಂದಃ**

ಆಸ್ತಿಯನ್ನು ಖರೀದಿಸುವವರು ಮುದ್ರಾಂಕ ಶುಲ್ಕವನ್ನು ಮತ್ತು ಇತರೆ ಶುಲ್ಕವನ್ನು ಕಟ್ಟುವುದು ಎಂದರೆ ಸರಿ. ನಿಪಿ-147ರ ಕ್ರಯಪತ್ರಕ್ಕೆ ಸಂಬಂಧಿಸಿದ ಶುಲ್ಕವನ್ನು ಗಿರಿಜಾಂಬಾರವರೇ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸಾಮಾನ್ಯವಾಗಿ ಖರೀದಿದಾರರೇ ಕೊಡುತ್ತಾರೆ ಈ ಕ್ರಯಪತ್ರವನ್ನು ನಾನು ನೋಂದಣಿ ಮಾಡಿಲ್ಲ ಎನ್ನುತ್ತಾರೆ. ಮಂಜುನಾಥ್ ರವರ ಹೆಂಡತಿ ಬರೆದುಕೊಟ್ಟಿರುವ ದಾನಪತ್ರದ ಪ್ರತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಆ ದಾನಪತ್ರವನ್ನು ಅವರ ತಂಗಿಗೆ ಮಾಡಿಕೊಟ್ಟಿರುತ್ತಾರೆ. ಕ್ರಯಪತ್ರದ ಮುದ್ರಣ ಶುಲ್ಕಕ್ಕೂ ದಾನಪತ್ರದ ಮುದ್ರಣಶುಲ್ಕಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ನಿಜ. ಕೆಹೆಚ್ ಬಿ ಯಿಂದ ಮಂಜುನಾಥ್ ರವರ ಹೆಂಡತಿಗೆ ಮಂಜೂರಾದ ನಿವೇಶನದ ಮಂಜೂರಾತಿ ಪತ್ರ ಹಾಗೂ ಕ್ರಯಪತ್ರವನ್ನು ಪೊಲೀಸರಿಗೆ ನೀಡಿರುತ್ತೇನೆ. ಆ ನಿವೇಶನದ ಕ್ರಯಪತ್ರವನ್ನು ಕೆ ಹೆಚ್ ಬಿ ಯವರು ನೋಂದಣಿ ಮಾಡಿಕೊಡುವ ಕಾಲಕ್ಕೆ ಆ ನಿವೇಶನದ ಮೇಲೆ ಪದ್ಮಾವತಿಯವರು ಕೆನರಾ ಬ್ಯಾಂಕಿನಿಂದ 4 ಲಕ್ಷ ರೂ ಸಾಲ ಪಡೆದುಕೊಂಡಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**